ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಪಟ್ಟಿಯೇ ಇಲ್ಲವಲ್ಲ.

ಶ್ರೀಮತಿ ಮೋಟಮ್ಮ :– ನಾನು ಪ್ಲಾಂಟರ್ ಆದರೆ ತಪ್ಪೇನು ? ನಮ್ಮ ಅಪ್ಪ ಕಾಫಿ ತೋಟದಲ್ಲಿ ಕಾರ್ಮಿಕರು ಆಗಿದ್ದರು. ನಾನು ಪ್ಲಾಂಟರ್ ಆಗುವುದು ತಪ್ಪೇ ಅಧ್ಯಕ್ಷರೇ ?

ಅಧ್ಯಕ್ಷರು :– ನೀವು ಇನ್ನೂ ಪ್ಲಾಂಟರ್ ಆಗಿಲ್ಲ ಎಂದರೆ, ಅತಿ ಶೀಘ್ರದಲ್ಲೇ ನೀವು ಪ್ಲಾಂಟರ್ ಆಗಬೇಕೆಂಬುದು ಈ ಸದನದ ಬಯಕೆ. ಇದಕ್ಕೆ ಪೂರಕವಾಗಿ ಕಂದಾಯ ಮಂತ್ರಿಗಳು ಪ್ರಯತ್ನ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಆಗಲೇ ಪ್ರಯತ್ನ ಮಾಡಿದ್ದೇವೆ.

ವಿಷಯ : ಹಳಿಯಾಳದಲ್ಲಿ ರಂಗ ಮಂದಿರದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೪ (೧೦೫೨)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆಯ ಎಷ್ಟು ಸ್ಥಳಗಳಲ್ಲಿ ಯುವಜನ ಸೇವಾ ಇಲಾಖೆಯಿಂದ ರಂಗ ಮಂದಿರ ಅಥವಾ ಯುವಕರ ಕೇಂದ್ರಗಳನ್ನು ನಿರ್ಮಿಸಲಾಗಿದೆ ಹಾಗೂ ಇದಕ್ಕಾಗಿ ವೆಚ್ಚವಾದ ಹಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಇಲಾಖೆಯ ವತಿಯಿಂದ ರಂಗ ಮಂದಿರವನ್ನು ಕಟ್ಟಲಾಗಿದೆಯೇ;

ಇ) ಹಾಗಿಲ್ಲವಿದ್ದಲ್ಲಿ ತಾಲ್ಲೂಕಿನಲ್ಲಿರುವ ಯುವಕರ ಅನುಕೂಲಕ್ಕಾಗಿ ರಂಗ ಮಂದಿರ ಅಥವಾ ಯುವಕ ಕೇಂದ್ರಗಳನ್ನು ನಿರ್ಮಿಸಲು ಸರಕಾರ ಕ್ರಮ ಕೈಗೊಳ್ಳುತ್ತಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) :– ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈ ಕೆಳಗಿನ ಅನುಕೂಲತೆಗಳನ್ನು ಒದಗಿಸಲು ಕ್ರಮ ಕೈಕೊಳ್ಳಲಾಗಿದೆ.

೧) ಕಾರವಾರ ಜಿಲ್ಲಾ ರಂಗ ಮಂದಿರ ಕಟ್ಟುವುದು,

೨) ಹಳಿಯಾಳ ಬಯಲು ರಂಗಮಂದಿರಕ್ಕೆ ಧನಸಹಾಯ ಮಾಡಲಾಗಿದೆ.

೩) ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಹರ್ಡೇಕರ ಮಂಜಪ್ಪ ಜನ್ಮ ಶತಾಬ್ದಿ ಬಯಲು ರಂಗ ಮಂದಿರಕ್ಕೆ ಅನುದಾನ ಕೊಡಲಾಗಿದೆ

ಈ) ಉದ್ಭವಿಸುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಈ ಉತ್ತರ ನೋಡಿದ ನಂತರ ಸರಕಾರದ ಪರವಾಗಿ ಯುವಜನ ಇಲಾಖೆ ನಮ್ಮ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಸ್ಪಷ್ಟವಾಗಿ ಕಾಣಿಸುತ್ತದೆ. ಏತಕ್ಕೆಂದರೆ ಯುವಕರ ಸಲುವಾಗಿ ಯಾವುದೇ ಫ್ಯಾಕ್ಟಿವಿಟೀಸ್ ನಮ್ಮ ಜಿಲ್ಲೆಯಲ್ಲಿ ಇಲ್ಲ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಎರಡು ಮೂರು ಪ್ರಶ್ನೆ ಕೇಳಲು ಇಚ್ಛಿಸುತ್ತೇನೆ. ತಾವೂ ಯುವಕರು ಯುವಕರ ಸಲುವಾಗಿ ಇದೇ ವರ್ಷ ಸಾಧ್ಯವಾಗದೇ ಹೋದರೆ ನೆಕ್ಸ್ಟ್ ಇಯರ್ ಜಿಲ್ಲೆಯಲ್ಲಿ ಈ ಯೂಥ್ ಸೆಂಟರ್ಸ್ ಹಾಗೂ ರಂಗ ಮಂದಿರ ಕಟ್ಟುವುದಕ್ಕೆ ಕಾರ್ಯ ಕ್ರಮ ಹಾಕಿಕೊಳ್ಳುತ್ತೀರಾ ? ನನ್ನ 'ಸಿ' ಪ್ರಶ್ನೆಗೆ ಉತ್ತರ ಕೊಡುವಾಗ ಕಾರವಾರದಲ್ಲಿ ರಂಗಮಂದಿರದ ಕೆಲಸ ನಡೆಯುತ್ತಿದೆ ಎಂದು ಹೇಳಿದ್ದೀರಿ. ಇದು ನಮ್ಮ ಕಾಲದಲ್ಲಿ ಸ್ಯಾಂಕ್ಷನ್ ಆಗಿದ್ದು ಆದರೆ ಕಳೆದ ಒಂದೆರಡು ವರ್ಷದಿಂದ ಹಣದ ಅಭಾವದಿಂದ ಇದರ ಕೆಲಸ ಸ್ಟ್ಯಾಂಡಸ್ಟಿಲ್ ಆಗಿದೆ. ಆದುದರಿಂದ ಈ ಕೆಲಸವನ್ನು ಆದಷ್ಟು ಬೇಗ ಮುಗಿಸಿ ತಾವು ಬಂದು ಆದರ ಉದ್ಘಾಟನೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮೂರನೆಯದಾಗಿ ನನ್ನ ಮತಕ್ಷೇತ್ರವಾದ ಹಳಿಯಾಳದಲ್ಲಿ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದುಕೊಂಡು ಬಂದಿರುವಂತಹ ಕುಸ್ತಿ ಪೈಲವಾನರು ಗಳು ಅಂದರೆ ರೆಸಲರ್ಸ್ ಇದ್ದಾರೆ. ಇಲ್ಲಿ ರೆಸ್ಲಿಂಗ್ ಸ್ಕೂಲ್ ಕಟ್ಟಬೇಕೆಂಬ ಪ್ರಸ್ತಾವನೆ ಸರಕಾರದ ಮುಂದೆ ಇತ್ತು. ಇದನ್ನು ಮಾಡುವುದಕ್ಕೆ ಏನಾದರೂ ಸಾಧ್ಯ ಇದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ರಮೇಶ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೂ ಸಚಿವರಾಗಿದ್ದರು ಆದರೆ ಪ್ರಶ್ನೆಯಲ್ಲಿ ಏನೋ ತಪ್ಪಾಗಿ ಬಂದಿರಬಹುದು. ಯೂಥ್ ಸೆಂಟರ್ಸ್ ಪ್ರಶ್ನೆ ಇಲ್ಲಿ ಬಂದಿಲ್ಲ ಮತ್ತು ಯುವಜನ ಸೇವಾ ಇಲಾಖೆಯಿಂದ ರಂಗ ಮಂದಿರ ನಿರ್ಮಾಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯುವಜನ ಖಾತೆಯ ಮೂಲಕ ರಂಗ ಮಂದಿರ ಕಟ್ಟುವುದಕ್ಕೆ ಆಗುವುದಿಲ್ಲ. ಅದಕ್ಕೆ ಸೆಪರೇಟ್ ವ್ಯವಸ್ಥೆ ಇದೆ. ಕುಸ್ತಿ ಪಟುಗಳ ಬಗ್ಗೆ ಹೇಳಿದ್ದೀರಿ. ಅದನ್ನು ನಾನು ಆದಷ್ಟು ಬೇಗ ಪರಿಶೀಲಿಸುತ್ತೇನೆ.

ಅಧ್ಯಕ್ಷರು :- ರಾಜ್ಯದಲ್ಲಿ ಯಾವುವಾದರೂ ಕುಸ್ತಿ ಸ್ಕೂಲ್‌ಗಳು ಇವೆಯೇ ?

ಶ್ರೀ ಎಸ್. ರಮೇಶ್ : ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ :– ರೆಸ್ಟಿಂಗ್ ಸ್ಕೂಲ್ ಬಗ್ಗೆ ಪ್ರಪೋಸಲ್ ಇದೆ. ಆದರೆ ನಿಮ್ಮ ಇಲಾಖೆಯಲ್ಲಿ ಹಣ ಇಲ್ಲ ಎಂದು ಕಳೆದ ಎರಡು ಮೂರು ವರ್ಷಗಳಿಂದ ಹಾಗೆಯೇ ಉಳಿದಿದೆ.

ಶ್ರೀ ಎಸ್. ರಮೇಶ್ :– ಈ ಪ್ರಸ್ತಾವನೆ ಸರಕಾರದ ಮುಂದೆ ಬಂದಿದೆ. ಹಣಕಾಸಿನ ಸೌಲಭ್ಯ ನೋಡಿಕೊಂಡು ಇದನ್ನು ಆದಷ್ಟು ಬೇಗನೆ ಮಾಡುತ್ತೇವೆ.

ವಿಷಯ :– ವೃದ್ಧಾಪ್ಯ ವೇತನದ ವಿತರಣೆ ಹಾಗೂ ಮಂಜೂರಾತಿಯಲ್ಲಿ ವಿಳಂಬ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೫ (೬೦೩)

ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ)

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ–

ಅ) ವೃದ್ಧಾಪ್ಯ ವೇತನ ಸಂದಾಯ ಮಾಡುವಲ್ಲಿ ಹಾಗೂ ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಯೋಚಿಸಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು)

ಅ) ವೃದ್ಧಾಪ್ಯ ವೇತನ ಮಂಜೂರು ಹಾಗೂ ಸಂದಾಯ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ವೃದ್ಧಾಪ್ಯ ವೇತನವನ್ನು ಮಂಜೂರು ಮಾಡುವ ಹಾಗೂ ಸಂದಾಯ ಮಾಡುವ ಕಾರ್ಯವನ್ನು ಹೆಚ್ಚಿನ ಪ್ರಾಶಸ್ತ್ಯದ ಮೇಲೆ ಮಾಡಲಾಗುತ್ತಿದೆ

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಪ್ರಾರಂಭವಾದಾಗಿನಿಂದ ಸಹಿತ ಮತ್ತು ಈ ವಿಧಾನಸಭೆ ಅಧಿವೇಶನ ರಚನೆಯಾದ ಮೇಲೆ ಅಂದರೆ ಕಳೆದ ಒಂದು ವರ್ಷದಿಂದಲೂ ನಾನು ಈ ಒಂದು ಪ್ರಶ್ನೆಯನ್ನು ಸತತವಾಗಿ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ವೃದ್ಧಾಪ್ಯ ವೇತನ ವಿತರಣೆ ಸರಿಯಾಗಿ ಆಗುತ್ತಿಲ್ಲ. ಮೂರು ತಿಂಗಳು ನಾಲ್ಕು ತಿಂಗಳು ಬಡವರಿಗೆ ಈ ವೃದ್ಧಾಪ್ಯ ವೇತನ ಸಿಗುತ್ತಿಲ್ಲ. ಇದು ತಮಗೂ ಜ್ಞಾಪಕದಲ್ಲಿರಬಹುದು. ಕಳೆದ ಮೂರು ಅಧಿವೇಶನಗಳು ಸೇರಿದಾಗಲೂ ಸಹ ಈ ವಿಷಯವನ್ನು ಹೇಳಿದ್ದೇನೆ. ಆದರೂ ಸರ್ಕಾರದವರು ಇದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಇಲ್ಲಿ ಉತ್ತರ ಕೊಟ್ಟಿದ್ದಾರೆ. ನಾನು ಸರ್ಕಾರದ ಗಮನಕ್ಕೆ ಹೇಗೆ ತರುವುದೆಂದು ನನಗೇ ಗೊತ್ತಾಗುತ್ತಿಲ್ಲ. ತಾವು ಕಳೆದ ಎಲ್ಲಾ ಅಧಿವೇಶನಗಳ ವರದಿಗಳನ್ನು ಬೇಕಾದರೆ ತೆಗೆಸಿ ನೋಡಿ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೋ ಇಲ್ಲವೋ ಎಂದು ತಮಗೆ ತಿಳಿಯುತ್ತದೆ. ಈ